# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಡಾ: ಹೆಚ್.ಎನ್.ಕೃಷ್ಣ, ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಇವರಿಗೆ ಸರ್ಕಾರಿ ವಸತಿ ಗೃಹ ಸಂಖ್ಯೆ: ಸಿ-27, ವಸಂತನಗರ, ಬೆಂಗಳೂರು, ಇಲ್ಲಿ ವಾಸ ಮುಂದುವರೆಯಲು ಅನುಮತಿ ನೀಡುವ ಬಗ್ಗೆ .

**ಓದಲಾಗಿದೆ:**

1) ಅಧಿಸೂಚನೆ ಸಂಖ್ಯೆ: ಡಿಪಿಎಆರ್ 17 ಆರ್‌ಟಿಐ 2006(ಪಿ), ದಿನಾಂಕ: 29-6-2007
2) ಡಾ: ಹೆಚ್.ಎನ್.ಕೃಷ್ಣ, ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಇವರು ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು, ಇವರಿಗೆ ಬರೆದ ಅರೆ ಸರ್ಕಾರಿ ಪತ್ರ ದಿನಾಂಕ: 10-07-2007
3) ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ, ಇವರು ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಪತ್ರ ಸಂಖ್ಯೆ: ಕಮಾಆ:46:ಆಡಳಿತ:2007, ದಿನಾಂಕ: 11-07-2007

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ಡಾ: ಹೆಚ್.ಎನ್.ಕೃಷ್ಣ, ಇವರನ್ನು, ಇವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ 5 ವರ್ಷದವರೆಗೆ ಅಥವಾ ಇವರಿಗೆ 65 ವರ್ಷ ಆಗುವವರೆವಿಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆವಿಗೆ Right to Information Act, 2005 (Central Act No.22 of 2005) ರ ಭಾಗ-15, ಉಪಭಾಗ(3)ರ ಅಡಿಯಲ್ಲಿ ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಅರೆ ಸರ್ಕಾರಿ ಪತ್ರದಲ್ಲಿ ಡಾ: ಹೆಚ್.ಎನ್.ಕೃಷ್ಣ ರವರು ತಾವು ದಿನಾಂಕ: 29-6-2007 ರಂದು ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದ್ದು , ತಾವು ಈ ಹಿಂದೆ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದಾಗ, ಹಂಚಿಕೆಯಾಗಿದ್ದ ಬೆಂಗಳೂರು ವಸಂತನಗರ ಬಡಾವಣೆಯ ಸರ್ಕಾರಿ ವಸತಿ ಗೃಹ ಸಂಖ್ಯೆ ಸಿ-27 ರಲ್ಲೇ ಮುಂದುವರೆಯಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದ್ದರ ಮೇರೆಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಶ್ರೀಯುತರನ್ನು ಸದರಿ ವಸತಿ ಗೃಹದಲ್ಲೇ ಮುಂದುವರೆಯುವ ಬಗ್ಗೆ ಸೂಕ್ತ ಆದೇಶ ನೀಡಬೇಕೆಂದು ಕರ್ನಾಟಕ ಮಾಹಿತಿ ಆಯೋಗದ ಕಾರ್ಯದರ್ಶಿಯವರು ಮುಖ್ಯ ಕಾರ್ಯದರ್ಶಿಯವರನ್ನು ಕೋರಿರುತ್ತಾರೆ.

ಡಾ: ಹೆಚ್.ಎನ್.ಕೃಷ್ಣರವರು ಹಿಂದೆ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದಾಗ ಅವರಿಗೆ ವಸಂತನಗರ ಬಡಾವಣೆಯ ಸರ್ಕಾರಿ ವಸತಿ ಗೃಹ ಸಂಖ್ಯೆ: ಸಿ-27 ಹಂಚಿಕೆಯಾಗಿದ್ದು , ಶ್ರೀಯುತರು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನದಿಂದ ದಿನಾಂಕ: 16-1-2007 ರಂದು ನಿವೃತ್ತಿ ಹೊಂದಿ, ತದನಂತರ ದಿನಾಂಕ: 29-6-2007 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿರುತ್ತಾರೆ.

ಕರ್ನಾಟಕ ಸರ್ಕಾರಿ (ಸರ್ಕಾರಿ ವಸತಿ ಗೃಹಗಳ ಹಂಚಿಕೆ) ನಿಯಮಗಳು 1999ರ ನಿಯಮ 10(1)(ಎ) ಮತ್ತು (2) ರ ಪ್ರಕಾರ ಸರ್ಕಾರಿ ವಸತಿ ಗೃಹದಲ್ಲಿ ವಾಸವಿದ್ದು , ಸೇವೆಯಿಂದ ನಿವೃತ್ತಿ ಹೊಂದಿದ ಅಧಿಕಾರಿಗೆ ಹಂಚಿಕೆ ಕೊನೆಗೊಂಡ 30 ದಿನಗಳಿಗಿಂತ ಹೆಚ್ಚಿಲ್ಲದ ಅವಧಿಗೆ ಮಾತ್ರ ವಸತಿ ಗೃಹದಲ್ಲಿ ವಾಸಿಸಲು ಅನುಮತಿಸಬಹುದಾಗಿದ್ದು , ಆ ನಂತರ ವಸತಿ ಗೃಹವನ್ನು ಖಾಲಿ ಮಾಡಿ ಅದರ ಸ್ವಾಧೀನತೆಯನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ ನಿಯಮ 13ರಲ್ಲಿ ನಿಗದಿಪಡಿಸಿರುವಂತೆ ಅವಧಿ ಮೀರಿ ವಾಸಿಸುವ ಹೆಚ್ಚಿನ ಅವಧಿಗೆ ವಾಸಿಸುವ ಮೊದಲ 3 ತಿಂಗಳ ಅವಧಿಗೆ ಸಾಮಾನ್ಯ ಲೈಸನ್ಸ್ ಶುಲ್ಕದ 2 ರಷ್ಟು, ಅದರ ನಂತರ ಮುಂದಿನ 3 ತಿಂಗಳಿಗೆ ಸಾಮಾನ್ಯ ಲೈಸನ್ಸ್ ಶುಲ್ಕದ 4 ಪಟ್ಟು, ಅದನ್ನು ಮೀರಿದರೆ ಸಾಮಾನ್ಯ ಲೈಸನ್ಸ್ ಶುಲ್ಕದ 8 ಪಟ್ಟು ದಂಡ ರೂಪದ ಲೈಸನ್ಸ್ ಶುಲ್ಕವನ್ನು ಪಾವತಿಸಬೇಕಾಗುವುದು. ಡಾ: ಹೆಚ್.ಎನ್.ಕೃಷ್ಣರವರು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನದಿಂದ ದಿನಾಂಕ: 16-01-2007 ರಂದು ನಿವೃತ್ತಿ ಹೊಂದಿದ್ದು , ನಿಯಮಾನುಸಾರ ದಿನಾಂಕ 15-02-2007 ರವರೆಗೆ ಮಾತ್ರ ಸಾಮಾನ್ಯ ಲೈಸನ್ಸ್ ಶುಲ್ಕ ಪಾವತಿಸಿ ಹಂಚಿಕೆಯಾದ ವಸತಿ ಗೃಹದಲ್ಲಿ ವಾಸಿಸಬಹುದಾಗಿತ್ತು, ಅದರ ನಂತರ ಶ್ರೀಯುತರು ಸದರಿ ವಸತಿ ಗೃಹದಲ್ಲಿ ವಾಸ ಮುಂದುವರೆಸಿ

ದಿನಾಂಕ: 29-6-2007 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತ ಹುದ್ದೆಯ ಅಧಿಕಾರವನ್ನು ಸ್ವೀಕರಿಸಿರುವುದರಿಂದ ದಿನಾಂಕ: 16-2-2007 ರಿಂದ ದಿನಾಂಕ 28-06-2007ರವರೆಗಿನ ಅವಧಿಗೆ ಮೇಲಿನ ನಿಯಮಗಳ ಪ್ರಕಾರ ದಂಡ ರೂಪದ ಲೈಸನ್ಸ್ ಶುಲ್ಕ ಪಾವತಿಸುವ ಷರತ್ತಿಗೊಳಪಟ್ಟು ಇವರಿಗೆ ವಸಂತನಗರ ಬಡಾವಣೆಯ ವಸತಿ ಗೃಹ ಸಂಖ್ಯೆ: ಸಿ-27ರಲ್ಲಿ ವಾಸವನ್ನು ಮುಂದುವರೆಸಲು ಅನುಮತಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ 136 ಪಿಪಿಎಂ 2007, ಬೆಂಗಳೂರು**
**ದಿನಾಂಕ 26ನೇ ಸೆಪ್ಟೆಂಬರ್ 2007**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಡಾ: ಹೆಚ್.ಎನ್.ಕೃಷ್ಣ, ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಇವರಿಗೆ ದಿನಾಂಕ 16-2-2007 ರಿಂದ 28-06-2007 ರವರೆಗಿನ ಅವಧಿಗೆ ಕರ್ನಾಟಕ ಸರ್ಕಾರಿ (ಸರ್ಕಾರಿ ವಸತಿ ಗೃಹಗಳ ಹಂಚಿಕೆ) ನಿಯಮಗಳು 1999ರ ನಿಯಮ 13ರ ಪ್ರಕಾರ ದಂಡ ರೂಪದ ಲೈಸನ್ಸ್ ಶುಲ್ಕ ಪಾವತಿಸುವ ಷರತ್ತಿಗೊಳಪಟ್ಟು, ವಸಂತನಗರ ಬಡಾವಣೆಯ ವಸತಿ ಗೃಹ ಸಂಖ್ಯೆ: ಸಿ-27 ರಲ್ಲಿ ವಾಸ ಮುಂದುವರೆಸಲು ಅನುಮತಿಸಲಾಗಿದೆ.

ಮೇಲ್ಕಂಡ ಅನುಮತಿಯು ಡಾ: ಹೆಚ್.ಎನ್.ಕೃಷ್ಣ ರವರು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುವವರೆವಿಗೆ ಅಥವಾ ಕರ್ನಾಟಕ ಸರ್ಕಾರಿ (ಸರ್ಕಾರಿ ವಸತಿ ಗೃಹಗಳ ಹಂಚಿಕೆ) ನಿಯಮಗಳು 1999ರ ನಿಯಮ 5(10)i ರಲ್ಲಿ ನಿಗಧಿಪಡಿಸಿರುವಂತೆ ಮೂಲ ಹಂಚಿಕೆ ದಿನಾಂಕದಿಂದ ಗರಿಷ್ಠ 5 ವರ್ಷ ಅವಧಿಯವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ.ಎಂ. ಲಕ್ಷ್ಮೀನಾರಾಯಣ
(ಬಿ.ಎಂ. ಲಕ್ಷ್ಮೀನಾರಾಯಣ) 26/9
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ (ಸೇವೆಗಳು-ಎ)

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ) (ಆಡಿಟ್-1 ಮತ್ತು 2) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ, ಇವರ ಆಪ್ತ ಕಾರ್ಯದರ್ಶಿ
3. ಮುಖ್ಯ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು
4. ಡಾ: ಹೆಚ್.ಎನ್.ಕೃಷ್ಣ, ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು
5. ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ, ವಿಧಾನ ಸೌಧ, ಬೆಂಗಳೂರು
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
7. ಕಾರ್ಯಪಾಲಕ ಅಭಿಯಂತರರು, ನಂ.1 ಕಟ್ಟಡಗಳ ವಿಭಾಗ, ಶೇಷಾದ್ರಿ ರಸ್ತೆ , ಬೆಂಗಳೂರು
8. ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರ ಆಪ್ತ ಸಹಾಯಕರು.
11. ಸರ್ಕಾರದ ಜಂಟಿ ಕಾರ್ಯದರ್ಶಿ (ಸೇವೆಗಳು), ಲೋಕೋಪಯೋಗಿ ಇಲಾಖೆ ಇವರ ಆಪ್ತ ಸಹಾಯಕರು.
12. ಶಾಖಾ ರಕ್ಷಾ ಕಡತ : ಹೆಚ್ಚಿನ ಪ್ರತಿಗಳು